ಕರ್ನಾಟಕ ಸರ್ಕಾರ
ಜಿಲ್ಲಾಧಿಕಾರಿಗಳ ಕಾರ್ಯಾಲಯ, ಕೊಪ್ಪಳ
ಜಿಲ್ಲಾ ನಗರಾಭಿವೃದ್ಧಿ ಕೋಶ ಕೊಪ್ಪಳ
ದೂರವಾಣಿ ಸಂಖ್ಯೆ : **08539 - 221895** ಇ-ಮೇಲ್ : **ka.koppal.dudc@gmail.com**

ಕಂ.ಸಂ 491802::ಕೆಓಪಿ–ಡಿಸಿ–11/18/2026 ದಿನಾಂಕ : 21– 09–2026

# :: ನೇಮಕಾತಿ ಅಧಿಸೂಚನೆ ::

ವಿಷಯ : ಕೊಪ್ಪಳ ಜಿಲ್ಲೆಯ ನಗರ, ಸ್ಥಳೀಯ ಸಂಸ್ಥೆಗಳಿಗೆ ಪೌರಕಾರ್ಮಿಕರ ನೇಮಕಾತಿ (ವಿಶೇಷ) ನಿಯಮಗಳ ರೀತ್ಯಾ 2ನೇ ಹಂತದ 33 ಹುದ್ದೆಗಳ ನೇರ ನೇಮಕಾತಿ ಮಾಡುವ ಕುರಿತು.

ಉಲ್ಲೇಖ 1 ಮಾನ್ಯ ಸರ್ಕಾರದ ಅಧಿಸೂಚನೆ ಸಂಖ್ಯೆ: ನ.ಅ.ಇ./176/ಜಿ.ಇ.ಎಲ್–2022(ಪಿ–2)(ಇ) ದಿನಾಂಕ:23–11–2022.

2 ಮಾನ್ಯ ನಿರ್ದೇಶಕರು ಪೌರಾಡಳಿತ ನಿರ್ದೇಶನಾಲಯ ಬೆಂಗಳೂರು ರವರ ಆದೇಶ ಸಂಖ್ಯೆ:1554386/ ಡಿಎಂ.ಎ/ ಇ.ಎಸ್.ಟಿ2/ಜಿ.ಆರ್.ಪಿ.ಡಿ/31/2024 ದಿನಾಂಕ 23–10–2024.

3 ಮಾನ್ಯ ಸರ್ಕಾರದ ಆದೇಶ ಸಂಖ್ಯೆ ಸಿ,ಆ,ಸು,ಇ/08/ಸೆಹಿಮ/95/ಬೆಂಗಳೂರು ದಿನಾಂಕ:20–06–1995

4 ಮಾನ್ಯ ಸರ್ಕಾರದ ಅಧೀನ ಕಾರ್ಯದರ್ಶಿಗಳು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವಾ ನಿಯಮಗಳು) ರವರ ಆದೇಶ ಸಂಖ್ಯೆ ಸಿ,ಆ.ಸು.ಇ 02 ಸೇಹಿಮ 2026 ಬೆಂಗಳೂರು ದಿನಾಂಕ 13–05–2026

5 ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು ನೇಮಕಾತಿ ಪ್ರಾದಿಕಾರ ಜಿಲ್ಲಾಧಿಕಾರಿಗಳ ಕಾರ್ಯಾಲಯ ಕೊಪ್ಪಳ ರವರ ಅಧ್ಯಕ್ಷತೆಯಲ್ಲಿ ದಿನಾಂಕ 17–09–2026 ರ ಸಮಿತಿ ಸಭೆಯ ನಡವಳಿಗಳು.

* * * * *

ಕೊಪ್ಪಳ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಖಾಲಿ ಇರುವ ಪೌರಕಾರ್ಮಿಕರ ಹುದ್ದೆಗಳಿಗೆ ಕರ್ನಾಟಕ ಪುರಸಭೆಗಳ (ನಗರಸಭೆಗಳು, ಪುರಸಭೆಗಳು ಮತ್ತು ಪಟ್ಟಣ ಪಂಚಾಯತಿಗಳ ಪೌರಕಾರ್ಮಿಕರ ನೇಮಕಾತಿ) ವಿಶೇಷ ನಿಯಮಗಳ ರೀತ್ಯಾ ಖಾಲಿ ಇರುವ ಪೌರಕಾರ್ಮಿಕರ ಹುದ್ದೆಗಳಿಗೆ ನೇರ ನೇಮಕಾತಿಯಡಿ ನೇಮಕಾತಿ ಮಾಡಲು ಉಲ್ಲೇಖಿತ (1) ರ ಸರ್ಕಾರದ ಅಧಿಸೂಚನೆಯಂತೆ ಮಾರ್ಗಸೂಚಿ ಕಲ್ಪಿಸಲಾಗಿದೆ. ಅದರಂತೆ ಉಲ್ಲೇಖಿತ (2)ರ ಆದೇಶದ ಮೂಲಕ ಹುದ್ದೆಗಳನ್ನು ಹಂಚಿಕೆಗೊಳಿಸಿ ಆದೇಶಿಸಿರುತ್ತಾರೆ. ಉಲ್ಲೇಖಿತ(3)ರಲ್ಲಿ ತಿಳಿಸಿರುವ ಮೀಸಲಾತಿಯಂತೆ ಉಲ್ಲೇಖಿತ(4)ರ ಆದೇಶದಂತೆ ನೇಮಕಾತಿ ಕೈಗೊಳ್ಳಲು ಉಲ್ಲೇಖಿತ(5)ರ ಸಭೆಯಲ್ಲಿ ರೋಸ್ಟರ ಬಿಂದುಗಳನ್ನು ಅಂತಿಮಗೊಳಿಸಿ ನಿರ್ಣಯಿಸಲಾಗಿರುತ್ತದೆ. ಪ್ರಯುಕ್ತ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಅಹ್ವಾನಿಸಲಾಗಿದ್ದು ಹಾಗೂ ಮೀಸಲಾತಿ ವಿವರಗಳನ್ನು ಈ ಕೆಳಕಾಣಿಸಿದಂತೆ ಪ್ರಚುರಪಡಿಸಿದೆ.

1. ಅಭ್ಯರ್ಥಿಗಳು ಪ್ರತಿ ಹುದ್ದೆಗೆ ಪ್ರತ್ಯೇಕ ಅರ್ಜಿಯನ್ನು ಸಲ್ಲಿಸತಕ್ಕದ್ದು.
2. ಅಭ್ಯರ್ಥಿಗಳು ಅರ್ಜಿಯಲ್ಲಿ ಕೋರುವ ಎಲ್ಲಾ ಮೀಸಲಾತಿ ಪ್ರಮಾಣ ಪತ್ರಗಳನ್ನು ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ಅಧಿಸೂಚನೆಯ ಅನುಬಂಧದಲ್ಲಿರುವ ನಮೂನೆಗಳೊಂದಿಗೆ ಕಡ್ಡಾಯವಾಗಿ ಸಲ್ಲಿಸತಕ್ಕದ್ದು.
3. ಭರ್ತಿ ಮಾಡಿದ ಅರ್ಜಿಗಳನ್ನು ಸಲ್ಲಿಸುವ ಕಾಲಮಿತಿ ಹಾಗೂ ವಿಳಾಸ

| ವಿವರ | ದಿನಾಂಕ | ಅರ್ಜಿ ನಮೂನೆ ಪಡೆಯುವ ಹಾಗೂ ಸಲ್ಲಿಸುವ ವಿಳಾಸ |
|---|---|---|
| ಅರ್ಜಿ ಸಲ್ಲಿಸಲು ನಿಗದಿ ಪಡಿಸಿದ ಪ್ರಾರಂಭಿಕ ದಿನಾಂಕ | 22–09–2026 | ಕೊಪ್ಪಳ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಹಾಲಿ ಪೌರಕಾರ್ಮಿಕರ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ, ಅಂದರೆ ನಗರಸಭೆ ಕೊಪ್ಪಳ, ಗಂಗಾವತಿ, ಪುರಸಭೆ ಕುಷ್ಟಗಿ, ಕಾರಟಗಿ,. ಪಟ್ಟಣ ಪಂಚಾಯತ ಯಲಬುರ್ಗಾ, ಕುಕನೂರ, ತಾವರಗೇರಾ, ಕನಕಗಿರಿ, ಭಾಗ್ಯನಗರ, ಕಛೇರಿಯಿಂದ ಅರ್ಜಿ ನಮೂನೆಯನ್ನು ಪಡೆದು ಭರ್ತಿ ಮಾಡಿದ ಅರ್ಜಿಗಳನ್ನು ಅದೇ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಸಲ್ಲಿಸುವುದು. |
| ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ | 22–10–2026 | |

## ಖಾಲಿ ಇರುವ ಪೌರಕಾರ್ಮಿಕರ ಹುದ್ದೆಗಳಿಗೆ ನಿಗಧಿಪಡಿಸಲಾದ ವಿದ್ಯಾರ್ಹತೆ ಮತ್ತು ಇತರೆ ವಿವರಗಳು

| ನಗರ ಸ್ಥಳೀಯ ಸಂಸ್ಥೆ ಹೆಸರು | ಹುದ್ದೆಯ ಹೆಸರು ಹಾಗೂ ವೇತನ ಶ್ರೇಣಿ | ಭರ್ತಿ ಮಾಡ ಬೇಕಾದ ಹುದ್ದೆಗಳ ಸಂಖ್ಯೆ | ಕನಿಷ್ಟ ವಿಧ್ಯಾರ್ಹತೆ/ ಅರ್ಹತೆಗಳು |
|---|---|---|---|
| ನಗರಸಭೆ ಕೊಪ್ಪಳ | ಪೌರಕಾರ್ಮಿಕರು ಹುದ್ದೆಯ ವೇತನ ಶ್ರೇಣಿ 27000–46675 | ಪೌರಕಾರ್ಮಿಕರು–6 | 1. ವಿದ್ಯಾರ್ಹತೆ ಅನ್ವಯಿಸುವುದಿಲ್ಲ.<br>2. ಕನ್ನಡ ಮಾತನಾಡಲು ಗೊತ್ತಿರಬೇಕು.<br>3. ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಪೌರಕಾ ರ್ಮಿಕರಾಗಿ ಪ್ರಸ್ತುತ ಕೊಪ್ಪಳ ಜಿಲ್ಲೆಯ ಅದೇ ನಗರ ಸ್ಥಳೀಯ ಸಂಸ್ಥೆಗಳಲ್ಲಿ ನೇರ ಪಾವತಿ/ ಕ್ಷೇಮಾಭಿವೃದ್ಧಿ/ದಿನಗೂಲಿ/ ಗುತ್ತಿಗೆ/ ಸಮಾನ ಕೆಲಸಕ್ಕೆ ಸಮಾನ ವೇತನ/ ಹೊರಗುತ್ತಿಗೆ ಆಧಾರದಲ್ಲಿ ದಿನಾಂಕ 07–08–2017 ರ ಪೂರ್ವದಲ್ಲಿ ನೇಮಕಾತಿಹೊಂದಿ ಪ್ರಸ್ತುತ ದಿನಾಂಕ 23–11–2022ಕ್ಕೆ 02 ವರ್ಷಕ್ಕಿಂತ ಕಡಿಮೆ ಇಲ್ಲದೇ ನಿರಂತರವಾಗಿ ಕರ್ತವ್ಯ ನಿರ್ವಹಿಸುತ್ತಿರಬೇಕು ಹಾಗೂ 2022ರ ಪೌರಕಾರ್ಮಿಕರ ವಿಶೇಷ ನೇಮಕಾತಿ ಅಧಿಸೂಚನೆಯಲ್ಲಿರುವ ಎಲ್ಲಾ ಷರತ್ತುಗಳನ್ವಯ ಅರ್ಹರಿರತಕ್ಕದ್ದು |
| ನಗರಸಭೆ ಗಂಗಾವತಿ | | ಪೌರಕಾರ್ಮಿಕರು–6 | |
| ಪುರಸಭೆ ಕುಷ್ಟಗಿ | | ಪೌರಕಾರ್ಮಿಕರು–3 | |
| ಪುರಸಭೆ ಕಾರಟಗಿ | | ಪೌರಕಾರ್ಮಿಕರು–3 | |
| ಪ.ಪಂ ಯಲಬುರ್ಗಾ | | ಪೌರಕಾರ್ಮಿಕರು–3 | |
| ಪ.ಪಂ ಕುಕನೂರ | | ಪೌರಕಾರ್ಮಿಕರು–3 | |
| ಪ.ಪಂ ತಾವರಗೇರಾ | | ಪೌರಕಾರ್ಮಿಕರು–3 | |
| ಪ.ಪಂ ಕನಕಗಿರಿ | | ಪೌರಕಾರ್ಮಿಕರು 3 | |
| ಪ.ಪಂ ಭಾಗ್ಯನಗರ | | ಪೌರಕಾರ್ಮಿಕರು–3 | |
| ಒಟ್ಟು ಹುದ್ದೆಗಳು | | ಪೌರಕಾರ್ಮಿಕ 33 | |

## ಕೊಪ್ಪಳ ನಗರಸಭೆಯಲ್ಲಿ ನೇರ ನೇಮಕಾತಿಗಾಗಿ ಖಾಲಿ ಇರುವ 6 ಪೌರಕಾರ್ಮಿಕರ ಹುದ್ದೆಗಳಿಗೆ ರೋಸ್ಟರಬಿಂದು ವರ್ಗೀಕರಣ ಪಟ್ಟಿ

| ಕ್ರ. ಸಂ. | ವರ್ಗೀಕರಣದ ವಿವರ | ಇತರೆ | ಮಹಿಳಾ ಅಭ್ಯರ್ಥಿ | ಗ್ರಾಮೀಣ ಅಭ್ಯರ್ಥಿ | ಅಂಗವಿಕಲ ಅಭ್ಯರ್ಥಿ | ಮಾಜಿ ಸೈನಿಕರು | ಕನ್ನಡ ಮಾಧ್ಯಮ ಅಭ್ಯರ್ಥಿ | ಯೋಜನಾ ನಿರಾಶ್ರಿತರು | ತೃತೀಯ ಲಿಂಗ | ಒಟ್ಟು |
|---|---|---|---|---|---|---|---|---|---|---|
| 1 | ಪ.ಜಾ. | 0 | 1 | 0 | 0 | 0 | 0 | 0 | 0 | **1** |
| 2 | ಪ.ಪಂ. | 0 | 0 | 0 | 0 | 0 | 0 | 0 | 0 | **0** |
| 3 | ಪ.ವರ್ಗ–1 | 0 | 1 | 0 | 0 | 0 | 0 | 0 | 0 | **1** |
| 4 | ಪ್ರವರ್ಗ–2ಎ | 0 | 1 | 0 | 0 | 0 | 0 | 0 | 0 | **1** |
| 5 | ಪ್ರರ್ಗ–2ಬಿ | 0 | 0 | 0 | 0 | 0 | 0 | 0 | 0 | **0** |
| 6 | ಪ್ರವರ್ಗ–3ಎ | 0 | 0 | 0 | 0 | 0 | 0 | 0 | 0 | **0** |
| 7 | ಪ್ರರ್ಗ–3ಬಿ | 0 | 0 | 0 | 0 | 0 | 0 | 0 | 0 | **0** |
| 8 | ಸಾಮಾನ್ಯ | 0 | 1 | 1 | 0 | 0 | 1 | 0 | 0 | **3** |
| | **ಒಟ್ಟು** | **0** | **4** | **1** | **0** | **0** | 1 | **0** | **0** | **6** |

## ಗಂಗಾವತಿ ನಗರಸಭೆಯಲ್ಲಿ ನೇರ ನೇಮಕಾತಿಗಾಗಿ ಖಾಲಿ ಇರುವ 6 ಪೌರಕಾರ್ಮಿಕರ ಹುದ್ದೆಗಳಿಗೆ ರೋಸ್ಟರ ಬಿಂದು ವರ್ಗೀಕರಣ ಪಟ್ಟಿ

| ಕ್ರ. ಸಂ. | ವರ್ಗೀಕರಣದ ವಿವರ | ಇತರೆ | ಮಹಿಳಾ ಅಭ್ಯರ್ಥಿ | ಗ್ರಾಮೀಣ ಅಭ್ಯರ್ಥಿ | ಅಂಗವಿಕಲ ಅಭ್ಯರ್ಥಿ | ಮಾಜಿ ಸೈನಿಕರು | ಕನ್ನಡ ಮಾಧ್ಯಮ ಅಭ್ಯರ್ಥಿ | ಯೋಜನಾ ನಿರಾಶ್ರಿತರು | ತೃತೀಯ ಲಿಂಗ | ಒಟ್ಟು |
|---|---|---|---|---|---|---|---|---|---|---|
| 1 | ಪ.ಜಾ. | 0 | 1 | 0 | 0 | 0 | 0 | 0 | 0 | 1 |
| 2 | ಪ.ಪಂ. | 0 | 0 | 0 | 0 | 0 | 0 | 0 | 0 | 0 |
| 3 | ಪ.ವರ್ಗ–1 | 0 | 0 | 0 | 0 | 0 | 0 | 0 | 0 | 0 |
| 4 | ಪ್ರವರ್ಗ–2ಎ | 1 | 0 | 0 | 0 | 0 | 0 | 0 | 0 | 1 |
| 5 | ಪ್ರರ್ಗ–2ಬಿ | 0 | 0 | 0 | 0 | 0 | 0 | 0 | 0 | 0 |
| 6 | ಪ್ರವರ್ಗ–3ಎ | 0 | 1 | 0 | 0 | 0 | 0 | 0 | 0 | 1 |
| 7 | ಪ್ರರ್ಗ–3ಬಿ | 0 | 0 | 0 | 0 | 0 | 0 | 0 | 0 | 0 |
| 8 | ಸಾಮಾನ್ಯ | 1 | 1 | 0 | 0 | 1 | 0 | 0 | 0 | 3 |
| | **ಒಟ್ಟು** | **2** | **3** | **0** | **0** | **1** | **0** | **0** | **0** | **6** |

**ಕುಷ್ಟಗಿ ಪುರಸಭೆಯಲ್ಲಿ ನೇರ ನೇಮಕಾತಿಗಾಗಿ ಖಾಲಿ ಇರುವ 3 ಪೌರಕಾರ್ಮಿಕರ ಹುದ್ದೆಗಳಿಗೆ ರೋಸ್ಟರ ಬಿಂದು ವರ್ಗೀಕರಣ ಪಟ್ಟಿ**

| ಕ್ರ.ಸಂ. | ವರ್ಗೀಕರಣದ ವಿವರ | ಇತರೆ | ಮಹಿಳಾ ಅಭ್ಯರ್ಥಿ | ಗ್ರಾಮೀಣ ಅಭ್ಯರ್ಥಿ | ಅಂಗವಿಕಲ ಅಭ್ಯರ್ಥಿ | ಮಾಜಿ ಸೈನಿಕರು | ಕನ್ನಡ ಮಾಧ್ಯಮ ಅಭ್ಯರ್ಥಿ | ಯೋಜನಾ ನಿರಾಶ್ರಿತರು | ತೃತೀಯ ಲಿಂಗ | ಒಟ್ಟು |
|---|---|---|---|---|---|---|---|---|---|---|
| 1 | ಪ.ಜಾ. | 0 | 1 | 0 | 0 | 0 | 0 | 0 | 0 | **1** |
| 2 | ಪ.ಪಂ. | 0 | 0 | 0 | 0 | 0 | 0 | 0 | 0 | **0** |
| 3 | ಪ.ವರ್ಗ–1 | 0 | 0 | 0 | 0 | 0 | 0 | 0 | 0 | **0** |
| 4 | ಪ್ರವರ್ಗ–2ಎ | 0 | 0 | 0 | 0 | 0 | 0 | 0 | 0 | **0** |
| 5 | ಪ್ರರ್ಗ–2ಬಿ | 0 | 0 | 0 | 0 | 0 | 0 | 0 | 0 | **0** |
| 6 | ಪ್ರವರ್ಗ–3ಎ | 0 | 0 | 0 | 0 | 0 | 0 | 0 | 0 | **0** |
| 7 | ಪ್ರರ್ಗ–3ಬಿ | 0 | 0 | 0 | 0 | 0 | 0 | 0 | 0 | **0** |
| 8 | ಸಾಮಾನ್ಯ | 0 | 1 | 1 | 0 | 0 | 0 | 0 | 0 | **2** |
| | **ಒಟ್ಟು** | **0** | **2** | **1** | **0** | **0** | **0** | **0** | **0** | **3** |

**ಕಾರಟಗಿ ಪುರಸಭೆಯಲ್ಲಿ ನೇರ ನೇಮಕಾತಿಗಾಗಿ ಖಾಲಿ ಇರುವ 3 ಪೌರಕಾರ್ಮಿಕರ ಹುದ್ದೆಗಳಿಗೆ ರೋಸ್ಟರ ಬಿಂದು ವರ್ಗೀಕರಣ ಪಟ್ಟಿ**

| ಕ್ರ.ಸಂ. | ವರ್ಗೀಕರಣದ ವಿವರ | ಇತರೆ | ಮಹಿಳಾ ಅಭ್ಯರ್ಥಿ | ಗ್ರಾಮೀಣ ಅಭ್ಯರ್ಥಿ | ಅಂಗವಿಕಲ ಅಭ್ಯರ್ಥಿ | ಮಾಜಿ ಸೈನಿಕರು | ಕನ್ನಡ ಮಾಧ್ಯಮ ಅಭ್ಯರ್ಥಿ | ಯೋಜನಾ ನಿರಾಶ್ರಿತರು | ತೃತೀಯ ಲಿಂಗ | ಒಟ್ಟು |
|---|---|---|---|---|---|---|---|---|---|---|
| 1 | ಪ.ಜಾ. | 0 | 0 | 1 | 0 | 0 | 0 | 0 | 0 | **1** |
| 2 | ಪ.ಪಂ. | 0 | 0 | 0 | 0 | 0 | 0 | 0 | 0 | **0** |
| 3 | ಪ.ವರ್ಗ–1 | 0 | 1 | 0 | 0 | 0 | 0 | 0 | 0 | **1** |
| 4 | ಪ್ರವರ್ಗ–2ಎ | 0 | 0 | 0 | 0 | 0 | 0 | 0 | 0 | **0** |
| 5 | ಪ್ರರ್ಗ–2ಬಿ | 0 | 0 | 0 | 0 | 0 | 0 | 0 | 0 | **0** |
| 6 | ಪ್ರವರ್ಗ–3ಎ | 0 | 0 | 0 | 0 | 0 | 0 | 0 | 0 | **0** |
| 7 | ಪ್ರರ್ಗ–3ಬಿ | 0 | 0 | 0 | 0 | 0 | 0 | 0 | 0 | **0** |
| 8 | ಸಾಮಾನ್ಯ | 0 | 1 | 0 | 0 | 0 | 0 | 0 | 0 | **1** |
| | **ಒಟ್ಟು** | **0** | **2** | **1** | **0** | **0** | **0** | **0** | **0** | **3** |

**ಯಲಬುರ್ಗಾ ಪಟ್ಟಣ ಪಂಚಾಯತಿಯಲ್ಲಿ ನೇರ ನೇಮಕಾತಿಗಾಗಿ ಖಾಲಿಇರುವ 3 ಪೌರಕಾರ್ಮಿಕರ ಹುದ್ದೆಗಳಿಗೆ ರೋಸ್ಟರ ಬಿಂದು ವರ್ಗೀಕರಣ ಪಟ್ಟಿ**

| ಕ್ರ.ಸಂ. | ವರ್ಗೀಕರಣದ ವಿವರ | ಇತರೆ | ಮಹಿಳಾ ಅಭ್ಯರ್ಥಿ | ಗ್ರಾಮೀಣ ಅಭ್ಯರ್ಥಿ | ಅಂಗವಿಕಲ ಅಭ್ಯರ್ಥಿ | ಮಾಜಿ ಸೈನಿಕರು | ಕನ್ನಡ ಮಾಧ್ಯಮ ಅಭ್ಯರ್ಥಿ | ಯೋಜನಾ ನಿರಾಶ್ರಿತರು | ತೃತೀಯ ಲಿಂಗ | ಒಟ್ಟು |
|---|---|---|---|---|---|---|---|---|---|---|
| 1 | ಪ.ಜಾ. | 0 | 0 | 0 | 0 | 0 | 0 | 0 | 0 | 0 |
| 4 | ಪ.ಪಂ. | 0 | 0 | 0 | 0 | 0 | 0 | 0 | 0 | 0 |
| 5 | ಪ.ವರ್ಗ–1 | 0 | 0 | 0 | 0 | 0 | 0 | 0 | 0 | 0 |
| 6 | ಪ್ರವರ್ಗ–2ಎ | 0 | 0 | 0 | 0 | 0 | 0 | 0 | 0 | 0 |
| 7 | ಪ್ರರ್ಗ–2ಬಿ | 0 | 0 | 0 | 0 | 0 | 0 | 0 | 0 | 0 |
| 8 | ಪ್ರವರ್ಗ–3ಎ | 1 | 0 | 0 | 0 | 0 | 0 | 0 | 0 | 1 |
| 9 | ಪ್ರರ್ಗ–3ಬಿ | 0 | 0 | 0 | 0 | 0 | 0 | 0 | 0 | 0 |
| 10 | ಸಾಮಾನ್ಯ | 0 | 1 | 1 | 0 | 0 | 0 | 0 | 0 | 2 |
| | **ಒಟ್ಟು** | **1** | **1** | **1** | **0** | **0** | **0** | **0** | **0** | **3** |

**ಕುಕನೂರ ಪಟ್ಟಣ ಪಂಚಾಯತಿಯಲ್ಲಿ ನೇರ ನೇಮಕಾತಿಗಾಗಿ ಖಾಲಿ ಇರುವ 3 ಪೌರಕಾರ್ಮಿಕರ ಹುದ್ದೆಗಳಿಗೆ ರೋಸ್ಟರ ಬಿಂದು ವರ್ಗೀಕರಣ ಪಟ್ಟಿ**

| ಕ್ರ.ಸಂ. | ವರ್ಗೀಕರಣದ ವಿವರ | ಇತರೆ | ಮಹಿಳಾ ಅಭ್ಯರ್ಥಿ | ಗ್ರಾಮೀಣ ಅಭ್ಯರ್ಥಿ | ಅಂಗವಿಕಲ ಅಭ್ಯರ್ಥಿ | ಮಾಜಿ ಸೈನಿಕರು | ಕನ್ನಡ ಮಾಧ್ಯಮ ಅಭ್ಯರ್ಥಿ | ಯೋಜನಾ ನಿರಾಶ್ರಿತರು | ತೃತೀಯ ಲಿಂಗ | ಒಟ್ಟು |
|---|---|---|---|---|---|---|---|---|---|---|
| 1 | ಪ.ಜಾ. | 0 | 0 | 0 | 0 | 0 | 0 | 0 | 0 | 0 |
| 2 | ಪ.ಪಂ. | 0 | 0 | 0 | 0 | 0 | 0 | 0 | 0 | 0 |
| 3 | ಪ.ವರ್ಗ–1 | 0 | 0 | 0 | 0 | 0 | 0 | 0 | 0 | 0 |
| 4 | ಪ್ರವರ್ಗ–2ಎ | 0 | 1 | 0 | 0 | 0 | 0 | 0 | 0 | 1 |
| 5 | ಪ್ರರ್ಗ–2ಬಿ | 0 | 0 | 0 | 0 | 0 | 0 | 0 | 0 | 0 |
| 6 | ಪ್ರವರ್ಗ–3ಎ | 0 | 0 | 0 | 0 | 0 | 0 | 0 | 0 | 0 |
| 7 | ಪ್ರರ್ಗ–3ಬಿ | 0 | 0 | 0 | 0 | 0 | 0 | 0 | 0 | 0 |
| 8 | ಸಾಮಾನ್ಯ | 1 | 0 | 1 | 0 | 0 | 0 | 0 | 0 | 2 |
| | **ಒಟ್ಟು** | **1** | **1** | **1** | **0** | **0** | **0** | **0** | **0** | **3** |

**ತಾವರಗೇರಾ ಪಟ್ಟಣ ಪಂಚಾಯತಿಯಲ್ಲಿ ನೇರ ನೇಮಕಾತಿಗಾಗಿ ಖಾಲಿ ಇರುವ 3 ಪೌರಕಾರ್ಮಿಕರ ಹುದ್ದೆಗಳಿಗೆ ರೋಸ್ಟರ ಬಿಂದು ವರ್ಗೀಕರಣ ಪಟ್ಟಿ**

| ಕ್ರ.ಸಂ. | ವರ್ಗೀಕರಣದ ವಿವರ | ಇತರೆ | ಮಹಿಳಾ ಅಭ್ಯರ್ಥಿ | ಗ್ರಾಮೀಣ ಅಭ್ಯರ್ಥಿ | ಅಂಗವಿಕಲ ಅಭ್ಯರ್ಥಿ | ಮಾಜಿ ಸೈನಿಕರು | ಕನ್ನಡ ಮಾಧ್ಯಮ ಅಭ್ಯರ್ಥಿ | ಯೋಜನಾ ನಿರಾಶ್ರಿತರು | ತೃತೀಯ ಲಿಂಗ | ಒಟ್ಟು |
|---|---|---|---|---|---|---|---|---|---|---|
| 1 | ಪ.ಜಾ. | 0 | 0 | 0 | 1 | 0 | 0 | 0 | 0 | **1** |
| 2 | ಪ.ಪಂ. | 0 | 0 | 0 | 0 | 0 | 0 | 0 | 0 | **0** |
| 3 | ಪ.ವರ್ಗ–1 | 0 | 0 | 0 | 0 | 0 | 0 | 0 | 0 | **0** |
| 4 | ಪ್ರವರ್ಗ–2ಎ | 0 | 0 | 0 | 0 | 0 | 0 | 0 | 0 | **0** |
| 5 | ಪ್ರರ್ಗ–2ಬಿ | 0 | 0 | 0 | 0 | 0 | 0 | 0 | 0 | **0** |
| 6 | ಪ್ರವರ್ಗ–3ಎ | 0 | 0 | 0 | 0 | 0 | 0 | 0 | 0 | **0** |
| 7 | ಪ್ರರ್ಗ–3ಬಿ | 0 | 0 | 0 | 0 | 0 | 0 | 0 | 0 | **0** |
| 8 | ಸಾಮಾನ್ಯ | 0 | 1 | 0 | 0 | 1 | 0 | 0 | 0 | **2** |
| | **ಒಟ್ಟು** | **0** | **1** | **0** | **1** | **1** | **0** | **0** | **0** | **3** |

**ಕನಕಗಿರಿ ಪಟ್ಟಣ ಪಂಚಾಯತಿಯಲ್ಲಿ ನೇರ ನೇಮಕಾತಿಗಾಗಿ ಖಾಲಿ ಇರುವ 3 ಪೌರಕಾರ್ಮಿಕರ ಹುದ್ದೆಗಳಿಗೆ ರೋಸ್ಟರ ಬಿಂದು ವರ್ಗೀಕರಣ ಪಟ್ಟಿ**

| ಕ್ರ.ಸಂ. | ವರ್ಗೀಕರಣದ ವಿವರ | ಇತರೆ | ಮಹಿಳಾ ಅಭ್ಯರ್ಥಿ | ಗ್ರಾಮೀಣ ಅಭ್ಯರ್ಥಿ | ಅಂಗವಿಕಲ ಅಭ್ಯರ್ಥಿ | ಮಾಜಿ ಸೈನಿಕರು | ಕನ್ನಡ ಮಾಧ್ಯಮ ಅಭ್ಯರ್ಥಿ | ಯೋಜನಾ ನಿರಾಶ್ರಿತರು | ತೃತೀಯ ಲಿಂಗ | ಒಟ್ಟು |
|---|---|---|---|---|---|---|---|---|---|---|
| 1 | ಪ.ಜಾ. | 0 | 0 | 0 | 0 | 0 | 0 | 0 | 0 | **0** |
| 2 | ಪ.ಪಂ. | 0 | 0 | 0 | 0 | 0 | 0 | 0 | 0 | **0** |
| 3 | ಪ.ವರ್ಗ–1 | 0 | 0 | 0 | 0 | 0 | 0 | 0 | 0 | **0** |
| 4 | ಪ್ರವರ್ಗ–2ಎ | 0 | 0 | 1 | 0 | 0 | 0 | 0 | 0 | **1** |
| 5 | ಪ್ರರ್ಗ–2ಬಿ | 0 | 0 | 0 | 0 | 0 | 0 | 0 | 0 | **0** |
| 6 | ಪ್ರವರ್ಗ–3ಎ | 0 | 0 | 0 | 0 | 0 | 0 | 0 | 0 | **0** |
| 7 | ಪ್ರರ್ಗ–3ಬಿ | 1 | 0 | 0 | 0 | 0 | 0 | 0 | 0 | **1** |
| 8 | ಸಾಮಾನ್ಯ | 0 | 0 | 1 | 0 | 0 | 0 | 0 | 0 | **1** |
| | **ಒಟ್ಟು** | **1** | **0** | **2** | **0** | **0** | **0** | **0** | **0** | **3** |

ಭಾಗ್ಯನಗರ ಪಟ್ಟಣ ಪಂಚಾಯತಿಯಲ್ಲಿ ನೇರ ನೇಮಕಾತಿಗಾಗಿ ಖಾಲಿ ಇರುವ 3 ಪೌರಕಾರ್ಮಿಕರ ಹುದ್ದೆಗಳಿಗೆ ರೋಸ್ಟರ ಬಿಂದು ವರ್ಗೀಕರಣ ಪಟ್ಟಿ

| ಕ್ರ. ಸಂ. | ವರ್ಗೀಕರಣದ ವಿವರ | ಇತರೆ | ಮಹಿಳಾ ಅಭ್ಯರ್ಥಿ | ಗ್ರಾಮೀಣ ಅಭ್ಯರ್ಥಿ | ಅಂಗವಿಕಲ ಅಭ್ಯರ್ಥಿ | ಮಾಜಿ ಸೈನಿಕರು | ಕನ್ನಡ ಮಾಧ್ಯಮ ಅಭ್ಯರ್ಥಿ | ಯೋಜನಾ ನಿರಾಶ್ರಿತರು | ತೃತಿಯ ಲಿಂಗ | ಒಟ್ಟು |
|---|---|---|---|---|---|---|---|---|---|---|
| 1 | ಪ.ಜಾ. | 0 | 0 | 0 | 0 | 0 | 0 | 0 | 0 | **0** |
| 2 | ಪ.ಪಂ. | 0 | 0 | 0 | 0 | 0 | 0 | 0 | 0 | **0** |
| 3 | ಪ.ವರ್ಗ–1 | 0 | 0 | 0 | 0 | 0 | 0 | 0 | 0 | **0** |
| 4 | ಪ್ರವರ್ಗ–2ಎ | 0 | 0 | 0 | 1 | 0 | 0 | 0 | 0 | **1** |
| 5 | ಪ್ರರ್ಗ–2ಬಿ | 0 | 0 | 0 | 0 | 0 | 0 | 0 | 0 | **0** |
| 6 | ಪ್ರವರ್ಗ–3ಎ | 0 | 0 | 0 | 0 | 0 | 0 | 0 | 0 | **0** |
| 7 | ಪ್ರರ್ಗ–3ಬಿ | 0 | 0 | 0 | 0 | 0 | 0 | 0 | 0 | **0** |
| 8 | ಸಾಮಾನ್ಯ | 0 | 2 | 0 | 0 | 0 | 0 | 0 | 0 | **2** |
| | **ಒಟ್ಟು** | **0** | **2** | **0** | **1** | **0** | **0** | **0** | **0** | **3** |

ಅಭ್ಯರ್ಥಿಗಳು ಅರ್ಜಿ ಭರ್ತಿ ಮಾಡುವ ಮೊದಲು ಅಧಿಸೂಚನೆಯಲ್ಲಿ ನೀಡಿರುವ ಅರ್ಜಿ ಭರ್ತಿ ಮಾಡುವ ಕುರಿತು ಸೂಚನೆಗಳು ಅರ್ಹತೆ ಷರತ್ತುಗಳನ್ನು ಓದಿಕೊಳ್ಳತಕ್ಕದ್ದು ನೇಮಕಾತಿ ಪ್ರಾಧಿಕಾರವು ದೃಢೀಕರಿಸಿ ನೀಡಿರುವ ಹುದ್ದೆಗಳ ಮೀಸಲಾತಿಗೆ ಸಂಬಂಧಿಸಿದ ಅಂಕಣದಲ್ಲಿ ಉಪಯೋಗಿಸಿದ ಪದಗಳ ಅರ್ಥವನ್ನು ಈ ಕೆಳಕಂಡಂತೆ ಅರ್ಥೈಸಿಕೊಳ್ಳಬೇಕು.

| | |
|---|---|
| ಸಾ | ಸಾಮಾನ್ಯ |
| ಪ.ಜಾತಿ | ಪರಿಶಿಷ್ಟ ಜಾತಿ |
| ಪ.ಪಂ | ಪರಿಶಿಷ್ಟ ಪಂಗಡ |
| ಪ್ರ.ವರ್ಗ–1 | ಪ್ರವರ್ಗ–1 |
| ಪ್ರವರ್ಗ–2ಎ | ಪ್ರವರ್ಗ–2ಎ |
| ಪ್ರವರ್ಗ–2ಬಿ | ಪ್ರರ್ಗ–2ಬಿ |
| ಪ್ರವರ್ಗ–3ಎ | ಪ್ರವರ್ಗ–3ಎ |
| ಪ್ರರ್ಗ–3ಬಿ | ಪ್ರವರ್ಗ–3ಬಿ |

**ಅಭ್ಯರ್ಥಿಗಳಿಗೆ ಸೂಚನೆ ಮತ್ತು ಷರತ್ತುಗಳು :**

1) ಕರ್ನಾಟಕ ಪುರಸಭೆ( ಅಧಿಕಾರಿ ಮತ್ತು ನೌಕರರ ನೇಮಕಾತಿ) ನಿಯಮಗಳು 2010 ನಿಯಮ 2(ಸಿ) ವಿವರಿಸಿದ ಅಧಿಕಾರದಂತೆ ನೇಮಕಾತಿ ಪ್ರಕ್ರಿಯೆ ಜರುಗಿಸಲಾಗುವುದು.

2) **ನೇರ ಪಾವತಿ** ಎಂದರೆ ದಿನಾಂಕ 07–08–2017 ರ ಪೂರ್ವದಲ್ಲಿ ನೇಮಕಾತಿಹೊಂದಿ ಪ್ರಸ್ತುತ ನೇರ ಪಾವತಿಯಡಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ದಿನಾಂಕ 23–11–2022ಕ್ಕೆ 02 ವರ್ಷಕ್ಕಿಂತ ಕಡಿಮೆ ಇಲ್ಲದೇ ನಿರಂತರವಾಗಿ ಕರ್ತವ್ಯ ನಿರ್ವಹಿಸುತ್ತಿರಬೇಕು ಪೌರಕಾರ್ಮಿಕರು ಹಾಗೂ 2022ರ ಪೌರಕಾರ್ಮಿಕರ ವಿಶೇಷ ನೇಮಕಾತಿ ಅಧಿಸೂಚನೆಯಲ್ಲಿರುವ ಎಲ್ಲಾ ಷರತ್ತುಗಳನ್ವಯ ಅರ್ಹರಿರತಕ್ಕದ್ದು

3) **ಕ್ಷೇಮಾಭಿವೃದ್ಧಿ** ಎಂದರೆ ಕರ್ನಾಟಕ ರಾಜ್ಯ ದಿನಗೂಲಿ ನೌಕರರ ಕ್ಷೇಮಾಭಿವೃದ್ಧಿ ಅಧಿನಿಯಮ 2012ರ ( ಕರ್ನಾಟಕ ಕಾಯ್ದೆ 2013 ರ ಕಲಂ 19) ಅಡಿಯಲ್ಲಿ ಕರ್ನಾಟಕ ರಾಜ್ಯದ ನಗರಸಭೆಗಳು, ಪುರಸಭೆಗಳು ಮತ್ತು ಪಟ್ಟಣ ಪಂಚಾಯತಿಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪೌರಕಾರ್ಮಿಕರು.

4) **ಪೌರಕಾರ್ಮಿಕರು** ಎಂದರೆ ರಾಜ್ಯದ ನಗರಸಭೆ ಪುರಸಭೆ ಮತ್ತು ಪಟ್ಟಣ ಪಂಚಾಯತಿಗಳಲ್ಲಿ ನೇರ ಪಾವತಿ ಕ್ಷೇಮಾಭಿವೃದ್ಧಿ ಅಥವಾ ದಿನಗೂಲಿ ಅಥವಾ ಗುತ್ತಿಗೆ ಅಥವಾ ಸಮಾನ ಕೆಲಸಕ್ಕೆ ಸಮಾನ ವೇತನದ ಅಥವಾ

ಹೊರಗುತ್ತಿಗೆ ಆಧಾರದ ಮೇಲೆ ಕನಿಷ್ಟ 2 ವರ್ಷಗಳಿಗಿಂತ ಕಡಿಮೆ ಇಲ್ಲದ ಸೇವೆಯನ್ನು ಸಲ್ಲಿಸಿರುವ ಮತ್ತು ಈ ನಿಯಮಗಳ ಪ್ರಾರಂಭದ ದಿನಾಂಕದಿಂದಲೂ ಕಾರ್ಯ ನಿರ್ವಹಿಸುತ್ತಿರುವ ವ್ಯಕ್ತಿ ಅಥವಾ ವ್ಯಕ್ತಿಗಳು.

5) **ಅನುಸೂಚಿ** ಎಂದರೆ ಈ ನಿಯಮಗಳಲ್ಲಿ ಹೇಳಿದ ಅನುಸೂಚಿ.

6) ಖಾಲಿ ಹುದ್ದೆಗಳು ಎಂದರೆ ಈ ನಿಯಮಗಳ ಮೂಲಕ ಭರ್ತಿ ಮಾಡಲು ಮಾನ್ಯ ನಿರ್ದೇಶಕರು ಪೌರಾಡಳಿತ ನಿರ್ದೇಶನಾಲಯ ಬೆಂಗಳೂರು ರವರ ಆದೇಶ ಸಂಖ್ಯೆ 1554386/ಡಿಎಂ.ಎ/ಇ.ಎಸ್.ಟಿ2/ಜಿ.ಆರ್.ಪಿ.ಡಿ/31/ 2024 ದಿನಾಂಕ 23-10-2024 ರಲ್ಲಿ ಹಂಚಿಕೆ ಮಾಡಲಾದ ಸಂಖ್ಯೆಯ ಪೌರಕಾರ್ಮಿಕರ ವೃಂದದ ಖಾಲಿ ಹುದ್ದೆಗಳು.

ಈ ನಿಯಮಗಳಲ್ಲಿ ಬಳಸಿರುವ ಆದರೆ ಪರಿಭಾಷಿಸದಿರುವ ಪದಗಳು ಮತ್ತು ಪದಾವಳಿಗಳು ಕರ್ನಾಟಕ ಪುರಸಭೆ( ಅಧಿಕಾರಿ ಮತ್ತು ನೌಕರರ ನೇಮಕಾತಿ) ನಿಯಮಗಳು, 2010ರಲ್ಲಿ ಅವುಗಳಿಗೆ ನೀಡಲಾದ ಅರ್ಥವನ್ನೆ ಅನ್ವಯಿಸತಕ್ಕದ್ದು.

7) **ವಯೋಮಿತಿ**

(1) ಕರ್ನಾಟಕ ನಾಗರೀಕ ಸೇವಾ ( ಸಾಮಾನ್ಯ ನೇಮಕಾತಿ) ನಿಯಮಗಳು 1977ರ ನಿಯಮಗಳು ಅಥವಾ ಕರ್ನಾಟಕ ಪುರಸಭೆ (ಅಧಿಕಾರಿ ಮತ್ತು ನೌಕರರ ನೇಮಕಾತಿ) ನಿಯಮಗಳು 2010ರ ನಿಯಮಗಳಲ್ಲಿ ಏನೇ ಒಳಗೊಂಡಿದ್ದರೂ ಸದರಿ ಅಧಿಸೂಚನೆ ಜಾರಿಗೆ ಬಂದ ದಿನಾಂಕದಿಂದ ಗರಿಷ್ಟ ವಯೋಮಿತಿ 55 ವರ್ಷಗಳನ್ನು ಮೀರತಕ್ಕದ್ದಲ್ಲ.

(2) ಅಭ್ಯರ್ಥಿಗಳು ಆಯಾ ನಗರ ಸ್ಥಳೀಯ ಸಂಸ್ಥೆಗಳಲ್ಲಿ ದಿನಾಂಕ 07-08-2017ರ ಪೂರ್ವದಲ್ಲಿ ನೇಮಕಾತಿ ಹೊಂದಿ ಪ್ರಸ್ತುತ ನೇರ ಪಾವತಿಯಡಿಯಲ್ಲಿ ಕರ್ತವ್ಯ ನಿರ್ವಹುಸುತ್ತಿರುವ ಪೌರಕಾರ್ಮಿಕರನ್ನು ನೇರ ನೇಮಕಾತಿಗೆ ಪರಿಗಣಿಸಲಾಗುವುದು ಹಾಗೂ 2022ರ ಪೌರಕಾರ್ಮಿಕರ ವಿಶೇಷ ನೇಮಕಾತಿ ಅಧಿಸೂಚನೆಯಲ್ಲಿ ವಿಧಿಸಿರುವ ಎಲ್ಲಾ ಷರತ್ತುಗಳಿಗೆಗೊಳಪಟ್ಟಿರಬೇಕು.

(3) ಅಭ್ಯರ್ಥಿಗಳ ವಯಸ್ಸನ್ನು ಜನನ ಪ್ರಮಾಣ ಪತ್ರ/ ಶೈಕ್ಷಣಿಕ ದಾಖಲಾತಿಗಳು/ ವೈದ್ಯರ ಪ್ರಮಾಣ ಪತ್ರಗಳ ದಾಖಲೆಗಳನ್ನಾಧರಿಸಿ ನಿರ್ಧರಿಸಲಾಗುವುದು.

8) ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ ಸಿ.ಆ.ಸುಇ 179 2020 ಸೇನೆನಿ ದಿನಾಂಕ 06-07-2021ರ ಆದೇಶದಲ್ಲಿ ತೃತಿಯ ಲಿಂಗದವರಿಗೆ ಶೇಕಡಾ 1 ಮೀಸಲಾತಿ ನೀಡಿರುವುದನ್ನು ಅನುಸರಿಸಿದೆ.

| ವರ್ಗ | ಕನಿಷ್ಠ | ಗರಿಷ್ಠ |
|---|---|---|
| ಪ.ಜಾತಿ/ ಪ.ಪಂ./ಪ್ರ-1, 2ಎ, 2ಬಿ, 3ಎ, 3ಬಿ/ ಸಾಮಾನ್ಯ ವರ್ಗ/ ಇತರೆ | 18 | 55 |

9) ಅರ್ಜಿಗಳನ್ನು ಅಯಾ ನಗರಸಭೆ/ ಪುರಸಭೆ/ಪಟ್ಟಣ ಪಂಚಾಯತಿಗಳಿಗೆ ನೇರವಾಗಿ ಸಲ್ಲಿಸಿ, ಸ್ವೀಕೃತಿಪಡೆಯತಕ್ಕದ್ದು ಅಂಚೆಮೂಲಕ/ ಮಿಂಚಂಚೆ ಮೂಲಕ ಅಥವಾ ಪ್ರತ್ಯೇಕವಾಗಿ ಸಲ್ಲಿಸಲು ಅವಕಾಶವಿರುವದಿಲ್ಲ.

10) ಕೊನೆಯ ದಿನಾಂಕದ ನಂತರ ಹಾಕಿದ ಅರ್ಜಿಯನ್ನು ಮತ್ತು ಅಪೂರ್ಣವಾದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

11) ಮೀಸಲಾತಿಯಡಿಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳು ಜಾತಿ ಪ್ರಮಾಣ ಪತ್ರದ ಬಗ್ಗೆ ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳು (ಅಧ್ಯಕ್ಷರು, ಜಾತಿ ಆದಾಯ ಪರಿಶೀಲನಾ ಸಮಿತಿ) ಸಿಂಧುತ್ವ ಪ್ರಮಾಣ ಪತ್ರ ಪಡೆದ ನಂತರ ನೇಮಕಾತಿ ಆದೇಶ ನೀಡಲಾಗುವುದು.

12) ಇತರೆ ವರ್ಗೀಕರಣದ ಅಡಿಯಲ್ಲಿ ಮೀಸಲಾತಿಯನ್ನು ಕೋರುವ ಅಭ್ಯರ್ಥಿಗಳು ಸಕ್ಷಮ ಪ್ರಾಧಿಕಾರವು ನೀಡಿರುವ ಪ್ರಮಾಣ ಪತ್ರಗಳನ್ನು ಅರ್ಜಿಯ ಜೊತೆಗೆ ಸಲ್ಲಿಸತಕ್ಕದ್ದು. (ಕಲಂ-6 The Transgender Persons (Protection of Rights) Act 2019)

13) ನೇಮಕಾತಿ ಬಗ್ಗೆ ಅಂತಿಮ ತೀರ್ಮಾನವನ್ನು ಅಧ್ಯಕ್ಷರು, ಆಯ್ಕೆ ಮತ್ತು ನೇರ ನೇಮಕಾತಿ ಪ್ರಾಧಿಕಾರ ಹಾಗೂ ಜಿಲ್ಲಾಧಿಕಾರಿ, ಕೊಪ್ಪಳ ಜಿಲ್ಲೆ ಕೊಪ್ಪಳ ಇವರು ಕಾಯ್ದಿರಿಸಿಕೊಂಡಿರುತ್ತಾರೆ.

14) ನಗರ ಸ್ಥಳೀಯ ಸಂಸ್ಥೆಗಳಲ್ಲಿ ನೇರ ಪಾವತಿ/ಕ್ಷೇಮಾಭಿವೃದ್ದಿ/ದಿನಗೂಲಿ/ ಗುತ್ತಿಗೆ ಆಧಾರ, ಸಮಾನ ಕೆಲಸಕ್ಕೆ ಸಮಾನ ವೇತನ ಹಾಗೂ ಹೊರಗುತ್ತಿಗೆ ಆಧಾರದ ಕ್ಷೇಮಾಭಿವೃದ್ಧಿ / ದಿನಗೂಲಿ/ ಗುತ್ತಿಗೆ ಆಧಾರ/ ಸಮಾನ ಕೆಲಸಕ್ಕೆ ಸಮಾನ ವೇತನ ಅಥವಾ ಹೊರಗುತ್ತಿಗೆ ಆಗಿ ಈಗಲೂ ಕರ್ತವ್ಯ ನಿರ್ವಹಿಸುತ್ತಿರುವ ಅಭ್ಯರ್ಥಿಗಳು ಸೇವೆ ಸಲ್ಲಿಸುತ್ತಿರುವ ದಾಖಲೆಗಳನ್ನು ದೃಢೀಕರಿಸಿ ಸಲ್ಲಿಸಬೇಕು.

15) ಹೊರಗುತ್ತಿಗೆ ಆಧಾರದ ಮೇಲೆ ಕೆಲಸ ನಿರ್ವಹಿಸುತ್ತಿರುವವರು ಪಿ.ಎಫ್/ಇ.ಎಸ್.ಐ ಮತ್ತು ಹೊರಗುತ್ತಿಗೆ ಏಜೆನ್ಸಿಯವರು ವೇತನವನ್ನು ಜಮಾ ಮಾಡಿರುವ ದಾಖಲೆಗಳ ದೃಢೀಕೃತ ಪ್ರತಿಗಳು ಸಲ್ಲಿಸುವುದು.

16) ವಯಸ್ಸಿನ ಬಗ್ಗೆ ಜನನ ಪ್ರಮಾಣ ಪತ್ರ/ಶೈಕ್ಷಣಿಕ ದಾಖಲೆ/ವೈದ್ಯರ ಪ್ರಮಾಣ ಪತ್ರಗಳ ದೃಢೀಕೃತ ಪ್ರತಿಗಳನ್ನು ಸಲ್ಲಿಸುವುದು ಮತ್ತು ಮೂಲ ದಾಖಲೆಗಳನ್ನು ಪರಿಶೀಲಿಸುವ ದಿನಾಂಕದಂದು ಹಾಜರಪಡಿಸತಕ್ಕದ್ದು.

17) ಕನಿಷ್ಠ ದೇಹ ದಾರ್ಢ್ಯತೆ ಹೊಂದಿರಬೇಕು ಅರ್ಜಿ ಸಲ್ಲಿಕೆ ಹಾಗೂ ಆಯ್ಕೆ ಸಮಯದಲ್ಲಿ ಸರಕಾರಿ ವೈದ್ಯರ ಪ್ರಮಾಣ ಪತ್ರವನ್ನು ಸಲ್ಲಿಸತಕ್ಕದ್ದು.

18) **ಅಂಗವಿಕಲ ಅಭ್ಯರ್ಥಿಗಳು** :

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 128 ಸೆನೆನಿ 2006 ದಿನಾಂಕ 01-08-2009 ರಂತೆ 4 ಮತ್ತು 24ನೇ ಬಿಂದುಗಳನ್ನು ದೃಷ್ಟಿ ಮಾಂದ್ಯತೆ ಹೊಂದಿದ ಅಭ್ಯರ್ಥಿಗಳಿಗೆ ಮೀಸಲಿರಿಸಬೇಕಾಗಿರುತ್ತದೆ. ಪ್ರಸ್ತುತ "ಡಿ" ಗ್ರೂಪ್ (ಪೌರಕಾರ್ಮಿಕ) ನೇಮಕಾತಿಯಲ್ಲಿ ಸಾಮಾನ್ಯ ವರ್ಗದಡಿ ಅಂಗವಿಕಲತೆ ಬಿಂದು 4 ಆಗಿರುತ್ತದೆ. ಆದರೆ ಸರ್ಕಾರದ ಆದೇಶ ಸಂಖ್ಯೆ ಡಿಪಿಎಆರ್ 54 ಎಸ್.ಆರ್.ಆರ್ 2012 ದಿನಾಂಕ 23-06-2012 ರಂತೆ "ಡಿ" ಗ್ರೂಪ್ ಪೌರಕಾರ್ಮಿಕ ಹುದ್ದೆಗೆ ದೃಷ್ಟಿ ಮಾಂದ್ಯತೆಯನ್ನು ಪರಿಗಣಿಸಲಾಗುವದಿಲ್ಲ ಅಲ್ಲದೇ ಈ ಹುದ್ದೆಗಳು ಸ್ವಚ್ಚತಾ ಕಾರ್ಯಗಳಿಗೆ ಸಂಬಂಧಿಸಿದ ಹುದ್ದೆಗಳಾಗಿದ್ದು, ದೈಹಿಕ ಶ್ರಮದ ಅಗತ್ಯವಿರುತ್ತದೆ. ಆದ್ದರಿಂದ ನೇಮಕಾತಿ ಪ್ರಕ್ರಿಯೆಯಲ್ಲಿ ಕುಷ್ಟರೋಗದಿಂದ ಗುಣಮುಖರಾದವರು (Leprosy Cured), ಶ್ರವಣ ದೋಷ (Hearing Impaired) ಅಭ್ಯರ್ಥಿಗಳನ್ನು ಮಾತ್ರ ಪರಿಗಣಿಸಲಾಗುವುದು.ಈ ಮೀಸಲಾತಿಯನ್ನು ಕೋರುವ ಅಭ್ಯರ್ಥಿಗಳು ಸಕ್ಷಮ ಪ್ರಾಧಿಕಾರದ ಪ್ರಮಾಣ ಪತ್ರ ಸಲ್ಲಿಸುವುದು.

19) **ಜಾತಿ/ ಮೀಸಲಾತಿ ಪ್ರಮಾಣ ಪತ್ರಗಳು** :-

ಮೀಸಲಾತಿ ಸೌಲಭ್ಯ ಅಪೇಕ್ಷಿಸುವ ಅಭ್ಯರ್ಥಿಗಳು ಜಾತಿ ಪ್ರಮಾಣ ಪತ್ರಗಳನ್ನು ಚಾಲ್ತಿಯಲ್ಲಿರುವ ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರದಿಂದ (ಸಂಬಂಧಪಟ್ಟ ತಹಶೀಲ್ದಾರ್ ರಿಂದ) ಪಡೆದು ಸಲ್ಲಿಸುವುದು ಮತ್ತು ಮೂಲ ದಾಖಲೆಗಳನ್ನು ಪರಿಶೀಲಿಸುವ ದಿನಾಂಕದಂದು ಹಾಜರುಪಡಿಸತಕ್ಕದ್ದು.

**20) ಯೋಜನಾ ನಿರಾಶ್ರಿತರಾದ ಕುಟುಂಬದ ಅಭ್ಯರ್ಥಿಗಳು :-**

ಸರ್ಕಾರದ ಯೋಜನೆಗಳಿಂದ ನಿರಾಶ್ರಿತರ ಕುಟುಂಬದ ಅಭ್ಯರ್ಥಿಗಳಿಗೆ ಮೀಸಲಿರಿಸಿದ ಹುದ್ದೆಗಳನ್ನು ಕ್ಲೇಮ್ ಮಾಡುವ ಅಭ್ಯರ್ಥಿಗಳು ಸಂಬಂಧಿಸಿದ ತಹಶೀಲ್ದಾರ್ ರವರು ನೀಡಿದ ಪ್ರಮಾಣ ಪತ್ರವನ್ನು ಪಡೆದಿರಬೇಕು.

**21) ಮಾಜಿ ಸೈನಿಕರ ಕುಟುಂಬದ ಅಭ್ಯರ್ಥಿಗಳು :-**

ಮಾಜಿ ಸೈನಿಕರು ಎನ್ನುವ ಬಗ್ಗೆ ಅಥವಾ ಭಾರತ ದೇಶದ ಒಕ್ಕೂಟ ಸಶಸ್ತ್ರ ದಳದಲ್ಲಿ ಸೇವೆ ಸಲ್ಲಿಸುತ್ತಿರುವಾಗ ಮರಣ ಹೊಂದಿದ ಅಥವಾ ಶಾಶ್ವತವಾಗಿ ಅಂಗಹೀನರಾದ ವ್ಯಕ್ತಿಗಳ ಕುಟುಂಬದ ಸದಸ್ಯರು ಎಂಬ ಬಗ್ಗೆ ಸಕ್ಷಮ ಮಿಲಿಟರಿ ಅಧಿಕಾರಿಗಳಿಂದ ಪ್ರಮಾಣ ಪತ್ರವನ್ನು ಪಡೆದಿರಬೇಕು.

**22) ಗ್ರಾಮೀಣ ಅಭ್ಯರ್ಥಿ :-**

ಗ್ರಾಮೀಣ ಅಭ್ಯರ್ಥಿ ಎಂದರೆ, ಒಂದು ಹುದ್ದೆಯಾಗಿ ನಿಯಮಿಸಲಾದ ಅರ್ಹತಾ ಪರೀಕ್ಷೆಯು ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯಾಗಿದ್ದಲ್ಲಿ, 1ನೇ ತರಗತಿಯಿಂದ 10ನೇ ತರಗತಿಯವರೆಗೆ ಗ್ರಾಮೀಣ ಪ್ರದೇಶದಲ್ಲಿ ವಿದ್ಯಾಭ್ಯಾಸ ಮಾಡಿರುವ ಬಗ್ಗೆ ವ್ಯಾಸಂಗದ ಪ್ರಮಾಣ ಪತ್ರವನ್ನು ಸಂಬಂಧಪಟ್ಟ ಪ್ರಾಧಿಕಾರದಿಂದ ಪಡೆದು, ದೃಢೀಕೃತ ಪತ್ರವನ್ನು ಸಲ್ಲಿಸತಕ್ಕದ್ದು. ಗ್ರಾಮೀಣ ಮೀಸಲಾತಿಗೆ ಒಳಪಡುವ ಅಭ್ಯರ್ಥಿಗಳು ಗ್ರಾಮಾಂತರ ಪ್ರದೇಶಗಳಲ್ಲಿ ವ್ಯಾಸಂಗ ಮಾಡಿ ಉತ್ತೀರ್ಣರಾಗಿರುವವರು, ಈ ಮೀಸಲಾತಿಯನ್ನು ಪಡೆಯಲು ಅರ್ಹರಿರುತ್ತಾರೆ.

ಗ್ರಾಮೀಣ ಅಭ್ಯರ್ಥಿಗೆಂದು ಮೀಸಲಿರಿಸಿದ ಹುದ್ದೆಗಳನ್ನು ಕ್ಲೈಮು ಮಾಡುವ ಸಾಮಾನ್ಯ ಅರ್ಹತೆಯ ಅಭ್ಯರ್ಥಿಗಳು ನಮೂನೆ-2 ರ ಪ್ರಮಾಣ ಪತ್ರವಲ್ಲದೇ, ಮೇಲ್ ಸ್ತರಕ್ಕೆ ಸೇರಿಲ್ಲದಿರುವ ಬಗ್ಗೆ ನಮೂನೆ-1 ರಲ್ಲಿ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಸಂಬಂಧಪಟ್ಟ ತಹಶೀಲ್ದಾರ್ ರವರಿಂದ ಪಡೆದು, ಅಂತೆಯೇ ಗ್ರಾಮೀಣ ಮೀಸಲಾತಿ ಕೋರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಪ್ರವರ್ಗ-1, ಪ್ರವರ್ಗ-2ಎ, 2ಬಿ, 3ಎ, 3ಬಿ ಮೀಸಲಾತಿಗೆ ಸೇರಿದ ಅಭ್ಯರ್ಥಿಗಳು ಕಡ್ಡಾಯವಾಗಿ ಗ್ರಾಮೀಣ ಮೀಸಲಾತಿಯ ಪ್ರಮಾಣ ಪತ್ರವನ್ನು ನಮೂನೆ-2 ರಲ್ಲಿ ನಿಗಧಿತ ಪ್ರಾಧಿಕಾರಿಗಳಿಂದ ಪಡೆದು ಸಂಬಂಧಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿಯವರಿಂದ ಮೇಲು ರುಜು ಮತ್ತು ಮೊಹರು ಮಾಡಿಸಿ ಸಲ್ಲಿಸಬೇಕಾಗಿರುತ್ತದೆ.

23) **ಕನ್ನಡ ಮಾಧ್ಯಮ ಅಭ್ಯರ್ಥಿಗಳು :-**

ಅ) ಸರ್ಕಾರದ ಅಧಿಸೂಚನೆ ಸಂಖ್ಯೆ:ಡಿಪಿಎಆರ್/71/ಎಸ್.ಆರ್.ಆರ್./2001 ದಿನಾಂಕ:24-10-2002 ರಲ್ಲಿ ಹೊರಡಿಸಿರುವ ಕರ್ನಾಟಕ ಸಕಾರಿ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು 1977 ರ ನಿಯಮ (9)(1)(ಸಿ) ರನ್ವಯ ಅಭ್ಯರ್ಥಿಯು 1 ರಿಂದ 10ನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿರುತ್ತಾರೆ ಎನ್ನುವ ಬಗ್ಗೆ ಸಂಬಂಧಪಟ್ಟ ಶಾಲೆಯ ಮುಖ್ಯೋಪಾಧ್ಯಾಯರ ಸಹಿ ಹಾಗೂ ಮೊಹರು ಹಾಗೂ ಸಂಬಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮೇಲ್ ರುಜು ಮತ್ತು ಮೊಹರು ನೊಂದಿಗೆ ಪ್ರಮಾಣ ಪತ್ರವನ್ನು ಪಡೆದು ಸಲ್ಲಿಸಬೇಕು.

ಬ) ಅರ್ಹ ಅಭ್ಯರ್ಥಿ ಲಬ್ಯವಾಗದೇ ಇದ್ದ ಪಕ್ಷದಲ್ಲಿ ಸರ್ಕಾರದ ನಿರ್ದೇಶನದಂತೆ ಕನ್ನಡ ಮಾತನಾಡಲು ಗೊತ್ತಿರಬೇಕು ಎಂಬ ಷರತ್ತುಗಳಿಗೊಳಪಡಿಸಿಕೊಂಡು, ಅಂತಿಮವಾಗಿ ನಿರ್ಧಾರ ಕೈಗೊಳ್ಳಲಾಗುವುದು.

24) ಅಭ್ಯರ್ಥಿಯು ಮಾನಸಿಕವಾಗಿ ಮತ್ತು ದೈಹಿಕವಾಗಿ ಆರೋಗ್ಯವಂತರಾಗಿರಬೇಕು ಮತ್ತು ಅವರ ನೇಮಕಾತಿಯು ಕರ್ತವ್ಯಗಳ ದಕ್ಷ ನಿರ್ವಹಣೆಗೆ ಆತಂಕವನ್ನುಂಟು ಮಾಡುವ ಸಂಭವವಿರುವ ಯಾವುದೇ ದೈಹಿಕ ನ್ಯೂನ್ಯತೆಯಿಂದ ಮುಕ್ತವಾಗಿರಬೇಕು. ದೈಹಿಕವಾಗಿ ಸಾಮರ್ಥ್ಯವಿರುವ ಬಗ್ಗೆ ಗ್ರೂಪ್ ಡಿ ( ಪೌರಕಾರ್ಮಿಕರು) ನೌಕರರಿಗೆ ನಿಗದಿಪಡಿಸಲಾದ ಕನಿಷ್ಟ ದೇಹದಾರ್ಡ್ಯತೆ ಹೊಂದಿರಬೇಕು ಅರ್ಜಿ ಸಲ್ಲಿಕೆ ಹಾಗೂ ಆಯ್ಕೆ ಸಮಯದಲ್ಲಿ ಸರಕಾರಿ ವೈದ್ಯರ ಪ್ರಮಾಣ ಪತ್ರವನ್ನು ಸಲ್ಲಿಸತಕ್ಕದ್ದು.

25) ದೈಹಿಕವಾಗಿ ಅನರ್ಹರಾಗಿದ್ದಾರೆಂಬುವುದಾಗಿ ವೈದ್ಯಕೀಯ ಮಂಡಳಿಯ ವರದಿಯ ಮೇಲೆ ಅನರ್ಹರೆಂಬುವುದಾಗಿ ತಿರಸ್ಕರಿಸುವ ಪೂರ್ಣ ವಿವೇಚನೆಯನ್ನು ಅಧ್ಯಕ್ಷರು, ಆಯ್ಕೆ ಮತ್ತು ನೇರ ನೇಮಕಾತಿ ಪ್ರಾಧಿಕಾರ ಹಾಗೂ ಜಿಲ್ಲಾಧಿಕಾರಿ ಕೊಪ್ಪಳ ಜಿಲ್ಲೆ, ಕೊಪ್ಪಳ/ ರಾಜ್ಯ ಸರ್ಕಾರ ಕಾಯ್ದಿರಿಸಿಕೊಂಡಿದೆ. ಜೊತೆಗೆ ಈ ಮೇಲ್ಕಂಡ ಅರ್ಹತೆಯನ್ನು ಹೊಂದಿರುವ ಅಭ್ಯರ್ಥಿಗಳು ನೇಮಕಾತಿಗಾಗಿ ಅರ್ಜಿ ಸಲ್ಲಿಸಲು ಅರ್ಹತೆಯನ್ನು ಹೊಂದಿರುತ್ತಾರೆ.

26) ಕೆಳಕಂಡ ಮೂಲ ದಾಖಲೆಗಳ ದೃಢೀಕೃತ ಪ್ರತಿಗಳನ್ನು ಅರ್ಜಿಯೊಂದಿಗೆ ಲಗತ್ತಿಸುವುದು :-

1) ಜನನ ಪ್ರಮಾಣ ಪತ್ರ/ ಎಸ್.ಎಸ್.ಎಲ್.ಸಿ. ಅಥವಾ ಜನ್ಮ ದಿನಾಂಕವನ್ನು ತೋರಿಸುವ ಶೈಕ್ಷಣಿಕ ಸಂಚಿತ ದಾಖಲೆಯ ಉದೃತ ಭಾಗ, ವೈದ್ಯರ ಪ್ರಮಾಣ ಪತ್ರ ಸಲ್ಲಿಸುವುದು.

2) ಅರ್ಹತೆ.

| | |
|---|---|
| ನೇರ ಪಾವತಿ ಪೌರಕಾರ್ಮಿಕ | ನಗರ ಸ್ಥಳಿಯ ಸಂಸ್ಥೆಗಳಲ್ಲಿ ನೇರ ಪಾವತಿಯಡಿ ದಿನಾಂಕ 07-08-2017ರ ಪೂರ್ವದಲ್ಲಿ ನೇಮಕಾತಿಹೊಂದಿ ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಕುರಿತು ಹಾಗೂ ದಿನಾಂಕ:23-11-2022ಕ್ಕೆ 02 ವರ್ಷಕ್ಕಿಂತ ಕಡಿಮೆ ಇಲ್ಲದೇ ನಿರಂತರವಾಗಿ ಕರ್ತವ್ಯ ನಿರ್ವಹಿಸುತ್ತಿರಬೇಕು ಈ ಕುರಿತು ಅಗತ್ಯ ದಾಖಲೆ ಹಾಗೂ ನಗರ ಸ್ಥಳಿಯ ಸಂಸ್ಥೆಯ ದೃಢೀಕರಣ ಪತ್ರ |
| ಕ್ಷೇಮಾಭಿವೃದ್ಧಿ ಪೌರಕಾರ್ಮಿಕ | ಕರ್ನಾಟಕ ರಾಜ್ಯ ದಿನಗೂಲಿ ನೌಕರರ ಕಲ್ಯಾಣ ಕಾಯ್ದೆ 2012 (ಕರ್ನಾಟಕ ಕಾಯ್ದೆ 19/2013) ರನ್ವಯ ಅಧಿಸೂಚನೆಯಲ್ಲಿರುವ ನೌಕರರು. |
| ದಿನಗೂಲಿ ಪೌರಕಾರ್ಮಿಕ | ದಿನಗೂಲಿ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಬಗ್ಗೆ ಸಕ್ಷಮ ಪ್ರಾಧಿಕಾರದಿಂದ ನೇಮಕಾತಿ ಆದೇಶ ಅಥವಾ ನಡವಳಿ. |
| ಗುತ್ತಿಗೆ ಪೌರಕಾರ್ಮಿಕ | ನೇಮಕಾತಿ ಆದೇಶ ಪತ್ರ ಅಥವಾ ನಡವಳಿ ಪೌರಾಯುಕ್ತರು/ ಮುಖ್ಯಾಧಿಕಾರಿಗಳಿಂದ ಸೇವೆ ಸಲ್ಲಿಸುತ್ತಿರುವ ಅವಧಿಗೆ ಅನುಗುಣವಾಗಿ ಪ್ರಮಾಣ ಪತ್ರ ಮತ್ತು 2 ವರ್ಷ ಮೇಲ್ಪಟ್ಟು ವೇತನ ಪಡೆದ ದಾಖಲೆ. |
| ಸಮಾನ ಕೆಲಸಕ್ಕೆ ಸಮಾನ ವೇತನ/ ಪೌರಕಾರ್ಮಿಕ | ನೇಮಕಾತಿ ಆದೇಶ ಪತ್ರ ಅಥವಾ ನಡವಳಿ ಪೌರಾಯುಕ್ತರು/ ಮುಖ್ಯಾಧಿಕಾರಿಗಳಿಂದ ಸೇವೆ ಸಲ್ಲಿಸುತ್ತಿರುವ ಅವಧಿಗೆ ಅನುಗುಣವಾಗಿ ಪ್ರಮಾಣ ಪತ್ರ ಮತ್ತು 2 ವರ್ಷ ಮೇಲ್ಪಟ್ಟು ವೇತನ ಪಡೆದ ದಾಖಲೆ. |
| ಹೊರಗುತ್ತಿಗೆ ಪೌರಕಾರ್ಮಿಕ | ಕಾರ್ಮಿಕ ರಾಜ್ಯ ವಿಮೆ (ಇ.ಎಸ್.ಐ.) ಮತ್ತು ಭವಿಷ್ಯ ನಿಧಿ (ಪಿ.ಎಫ್.) ಮತ್ತು 2 ವರ್ಷ ಮೇಲ್ಪಟ್ಟು ವೇತನ ಪಡೆದ ದಾಖಲೆ. |

3) ಅರ್ಜಿಯಲ್ಲಿ ತಪ್ಪು/ ಸುಳ್ಳು ಮಾಹಿತಿ ನೀಡಿ ಉದ್ಯೋಗ ಪಡೆದಲ್ಲಿ ಅಂತಹ ಅಭ್ಯರ್ಥಿಗಳ ನೇಮಕಾತಿಯನ್ನು ವಜಾಗೊಳಿಸುವುದಲ್ಲದೆ ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗುವುದು.

4) ಅರ್ಜಿಯಲ್ಲಿ ನೀಡುವ ವಿಳಾಸವೇ ಅಂತಿಮವಾಗಿದ್ದು, ಎಲ್ಲಾ ಪತ್ರ ವ್ಯವಹಾರಗಳನ್ನು ಅದೇ ವಿಳಾಸಕ್ಕೆ ಸಂಬಂಧಿಸಿದ ನಗರ ಸ್ಥಳೀಯ ಸಂಸ್ಥೆಗಳ ಮುಖ್ಯಸ್ಥರುಗಳ ಮೂಲಕ ಕಳುಹಿಸಿಕೊಡಲಾಗುವುದು.

5) ಅಂತಿಮವಾಗಿ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡುವ ಮುನ್ನ ಯಾವುದೇ ಹಂತದಲ್ಲಿ ಯಾವುದೇ ಕಾರಣ/ ಮಾಹಿತಿ ನೀಡದೇ ಈ ನೇಮಕಾತಿ ಪ್ರಕ್ರಿಯೆಯನ್ನು ಮುಂದೂಡುವ ಅಥವಾ ರದ್ದುಪಡಿಸುವ ಅಥವಾ ವಿಧಿಸಲಾಗಿರುವ ಯಾವುದೇ ಷರತ್ತನ್ನು ಸಡಿಲಗೊಳಿಸುವ ಅಥವಾ ಹೆಚ್ಚುವರಿ ಷರತ್ತನ್ನು ವಿಧಿಸುವ, ತುಂಬಲಾಗುವ ಹುದ್ದೆಗಳ ಸಂಖ್ಯೆಯನ್ನು ಬದಲಾಯಿಸುವ/ ನಿರ್ಣಯಿಸುವ ಅಧಿಕಾರವನ್ನು ಅಧ್ಯಕ್ಷರು ಆಯ್ಕೆ ಮತ್ತು ನೇರ ನೇಮಕಾತಿ ಪ್ರಾಧಿಕಾರ ಹಾಗೂ ಜಿಲ್ಲಾಧಿಕಾರಿ, ಕೊಪ್ಪಳ ಜಿಲ್ಲೆ ರವರು ಕಾಯ್ದಿರಿಸಿಕೊಂಡಿರುತ್ತಾರೆ.

6) ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ನಗರಾಭಿವೃದ್ಧಿ ಕೋಶ, ಕೊಪ್ಪಳ/ ನಗರಸಭೆ ಕೊಪ್ಪಳ/ ನಗರಸಭೆ ಗಂಗಾವತಿ/ ಪುರಸಭೆ ಕುಷ್ಟಗಿ/ ಪುರಸಭೆ ಕಾರಟಗಿ/ ಪಟ್ಟಣ ಪಂಚಾಯಿತಿ, ಯಲಬುರ್ಗಾ/ ಕುಕನೂರು/ ಕನಕಗಿರಿ/ ತಾವರಗೇರಾ/ ಭಾಗ್ಯನಗರ ನಗರ ಸ್ಥಳೀಯ ಸಂಸ್ಥೆಗಳ ಕಛೇರಿಯನ್ನು ಸಂಪರ್ಕಿಸಬಹುದು.

27) ಸದರಿ ಅಧಿಸೂಚನೆಯು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿರುವ ರಿಟ್ ಅರ್ಜಿ ಸಂಖ್ಯೆ 200448/2025 ರ ಅಂತಿಮ ಆದೇಶಕ್ಕೆ ಒಳಪಟ್ಟಿರುತ್ತದೆ.

28) ಸದರಿ ಅಧಿಸೂಚನೆಯ ಮಾನ್ಯ ಉಚ್ಚ ನ್ಯಾಯಾಲಯ ಧಾರವಾಡದಲ್ಲಿ ದಾಖಲಾಗಿರುವ ಗಂಗಾವತಿ ನಗರಸಭೆಗೆ ಸಂಬಂಧಿಸಿದಂತೆ ರಿಟ್ ಪಿಟಿಷನ್ ಸಂಖ್ಯೆ 103911/2024 ಹಾಗೂ ಯಲಬುರ್ಗಾ ಪಟ್ಟಣ ಪಂಚಾಯತಿಗೆ ಸಂಬಂಧಿಸಿದಂತೆ 106742/2024 ಮತ್ತು ಭಾಗ್ಯನಗರ ಪಟ್ಟಣ ಪಂಚಾಯತಿಗೆ ಸಂಬಂಧಿಸಿದಂತೆ 102354/2025 ರ ಅಂತಿಮ ಆದೇಶಕ್ಕೆ ಒಳಪಟ್ಟಿರುತ್ತದೆ.

ಅಧ್ಯಕ್ಷರು
ಆಯ್ಕೆ ಮತ್ತು ನೇರ ನೇಮಕಾತಿ ಪ್ರಾಧಿಕಾರ
ಹಾಗೂ ಜಿಲ್ಲಾಧಿಕಾರಿಗಳು,ಕೊಪ್ಪಳ ಜಿಲ್ಲೆ.

ಪ್ರತಿಯನ್ನು

1. ಮಾನ್ಯ ಸರ್ಕಾರದ ಕಾರ್ಯದರ್ಶಿಗಳು ನಗರಾಭಿವೃದ್ಧಿ ಇಲಾಖೆ ವಿಕಾಸ ಸೌಧ ಬೆಂಗಳೂರು ರವರಿಗೆ ಮಾಹಿತಿಗಾಗಿ.
2. ಮಾನ್ಯ ನಿರ್ದೇಶಕರು ಪೌರಾಡಳಿತ ನಿರ್ದೇಶನಾಲಯ ಬೆಂಗಳೂರು ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
3. ರಾಜ್ಯದ ಎಲ್ಲಾ ಯೋಜನಾ ನಿರ್ದೇಶಕರು ಜಿಲ್ಲಾ ನಗರಾಭಿವೃದ್ಧಿ ಕೋಶಗಳಿಗೆ ಕಳುಹಿಸುತ್ತಾ ತಮ್ಮ ಕಾರ್ಯಾಲಯದ ಸೂಚನಾ ಫಲಕದಲ್ಲಿ ಪ್ರಕಟಿಸಲು ಕೋರಲಾಗಿದೆ.
4. ಉಪ ನಿರ್ದೇಶಕರು ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ ಕೊಪ್ಪಳ ಜಿಲ್ಲೆ ಇವರಿಗೆ ಮಾಹಿತಿಗಾಗಿ ಹಾಗೂ ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲು
5. ಜಿಲ್ಲಾ ಅಧಿಕಾರಿ ಹಿಂದುಳಿದ ವರ್ಗಗಳ ಹಾಗೂ ಹಾಗೂ ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆ ಕೊಪ್ಪಳ ಇವರಿಗೆ ಮಾಹಿತಿಗಾಗಿ ಹಾಗೂ ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲು
6. ಉಪ ನಿರ್ದೇಶಕರು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಕೊಪ್ಪಳ ಇವರಿಗೆ ಮಾಹಿತಿಗಾಗಿ ಹಾಗೂ ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲು
7. ಸಹಾಯಕ ಆಯುಕ್ತರು ಉಪ ವಿಭಾಗ ಕೊಪ್ಪಳ ಇವರಿಗೆ ಮಾಹಿತಿಗಾಗಿ ಹಾಗೂ ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲು
8. ತಹಶೀಲ್ದಾರರು ಕೊಪ್ಪಳ/ಗಂಗಾವತಿ/ಯಲಬುರ್ಗಾ/ಕುಷ್ಟಗಿ/ಕನಕಗಿರಿ ಇವರಿಗೆ ಮಾಹಿತಿಗಾಗಿ.
9. ಪೌರಾಯುಕ್ತರು ನಗರಸಭೆ ಕೊಪ್ಪಳ/ ಗಂಗಾವತಿ ಹಾಗೂ ಮುಖ್ಯಾಧಿಕಾರಿಗಳು ಪುರಸಭೆ ಕುಷ್ಟಗಿ/ ಕಾರಟಗಿ ಹಾಗೂ ಮುಖ್ಯಾಧಿಕಾರಿಗಳು ಪಟ್ಟಣ ಪಂಚಾಯತ ಯಲಬುರ್ಗಾ/ ಕುಕನೂರ / ತಾವರಗೇರಾ/ ಕನಕಗಿರಿ/ ಭಾಗ್ಯನಗರ ಇವರಿಗೆ ಮಾಹಿತಿಗಾಗಿ ಹಾಗೂ ಸದರಿ ಅಧಿಸೂಚನೆಯನ್ನು ಕಛೇರಿ ವೆಬ್ ಸೈಟನಲ್ಲಿ ಮತ್ತು ತಮ್ಮ ಕಛೇರಿಯ ಸೂಚನಾ ಫಲಕದಲ್ಲಿ ಹಾಗೂ ನಗರ ವ್ಯಾಪ್ತಿಯಲ್ಲಿಯ ಕಛೇರಿಗಳ ಸೂಚನಾ ಫಲಕದಲ್ಲಿ ಪ್ರಚುರ ಪಡಿಸಲು ಸೂಚಿಸಿದೆ.
10. ಈ ಕಾರ್ಯಾಲಯದ ಸೂಚನಾ ಫಲಕಕ್ಕೆ.
11. ಕಛೇರಿ ಪ್ರತಿ

21/9/26

ಅಧ್ಯಕ್ಷರು
ಆಯ್ಕೆ ಮತ್ತು ನೇರ ನೇಮಕಾತಿ ಪ್ರಾಧಿಕಾರ
ಹಾಗೂ ಜಿಲ್ಲಾಧಿಕಾರಿಗಳು,
ಕೊಪ್ಪಳ ಜಿಲ್ಲೆ.

**ಪೌರಕಾರ್ಮಿಕ ನೇಮಕಾತಿ (ವಿಶೇಷ) ನಿಯಮಗಳ ರೀತ್ಯಾ ನೇರ ನೇಮಕಾತಿ ಮಾಡುವ ಬಗ್ಗೆ ಹುದ್ದೆಯ ನೇಮಕಾತಿ ಅರ್ಜಿ**
**(ಸರಕಾರದ ಅಧಿಸೂಚನೆ ಸಂಖ್ಯೆ: ಯು.ಡಿ.ಡಿ./176/ಜಿ.ಇ.ಎಲ್–2022(ಪಿ–2)(ಇ) ದಿನಾಂಕ:23–11–2022 ರಂತೆ 2ನೇ ಹಂತ)**

ರವರಿಗೆ,
ಮಾನ್ಯ ಅಧ್ಯಕ್ಷರು ಆಯ್ಕೆ ಮತ್ತು ನೇರ ನೇಮಕಾತಿ ಪ್ರಾಧಿಕಾರ
ಹಾಗೂ ಜಿಲ್ಲಾಧಿಕಾರಿಗಳು,ಕೊಪ್ಪಳ ಜಿಲ್ಲೆ.

| | | |
|---|---|---|
| 1 | ಹೆಸರು | |
| 2 | ಖಾಯಂ ವಿಳಾಸ | |
| 3 | ಅಂಚೆ ವಿಳಾಸ | |
| 4 | ತಂದೆ:/ ತಾಯಿ/ ಗಂಡನ ಹೆಸರು | |
| 5 | ವಿದ್ಯಾರ್ಹತೆ | |
| 6 | ಜನ್ಮ ದಿನಾಂಕ<br>(ದೃಢೀಕರಣ ಲಗತ್ತಿಸುವುದು) | |
| 7 | ಆದಾರ ಸಂಖ್ಯೆ (ಝುರಾಕ್ಸ್ ಪ್ರತಿ ಸಲ್ಲಿಸುವುದು) | |
| 8 | ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವ ಹುದ್ದೆ ಮತ್ತು ಸ್ಥಳ<br>(ನೇರ ಪಾವತಿ ಆಧಾರದಡಿ) ಇವುಗಳ ಬಗ್ಗೆ ಸ್ಪಷ್ಟವಾಗಿ ನಮೂದಿಸುವುದು. | |
| 9 | ಸೇವಾ ಅನುಭವ (ವರ್ಷಗಳಲ್ಲಿ/ ತಿಂಗಳು/ ದಿನಗಳಲ್ಲಿ) | |
| 10 | ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವ ನೇರ ಪಾವತಿ ನೌಕರರು ಈ ಮೊದಲು ಹೊರಗುತ್ತಿಗೆ ಆಧಾರದ ಮೇಲೆ ನೇಮಕವಾದ ಕುರಿತು ಸಂಬಂಧಪಟ್ಟ ಗುತ್ತಿಗೆ ಏಜೇನ್ಸಿಯಿಂದ ದೃಢೀಕರಣ ಲಗತ್ತಿಸುವುದು (ನೇರ ಪಾವತಿ ನೌಕರರಾದ ಬಗ್ಗೆ ಸ್ಪಷ್ಟವಾಗಿ ನಮೂದಿಸುವುದು, ದೃಢೀಕರಣವನ್ನು ಪೌರಾಯುಕ್ತರು/ ಮುಖ್ಯಾಧಿಕಾರಿಗಳು ಮರುದೃಢೀಕರಿಸುವುದು) | |
| 11 | ತಹಶೀಲ್ದಾರ ರವರಿಂದ ಪಡೆದ ಜಾತಿ ಪ್ರಮಾಣ ಪತ್ರ. (ಪ್ರತಿ ಲಗತ್ತಿಸುವುದು) | |
| 12 | ದೈಹಿಕ ಅರ್ಹತೆ ಬಗ್ಗೆ ವೈದ್ಯಕೀಯ ಪ್ರಮಾಣ ಪತ್ರ. (ಪ್ರತಿ ಲಗತ್ತಿಸುವುದು) | |
| 13 | ಅರ್ಜಿದಾರರ ಭವಿಷ್ಯ ನಿಧಿ (ಪಿ.ಎಫ್.), ಮತ್ತು ರಾಜ್ಯ ಕಾರ್ಮಿಕ ವಿಮೆ (ಇ.ಎಸ್.ಐ.) ದೃಢೀಕೃತ ಪ್ರತಿ ಲಗತ್ತಿಸುವುದು. | |
| 14 | ಕನ್ನಡ ಮಾತನಾಡಲು ಬರುತ್ತದೆಯೇ? (ಹೌದು/ ಇಲ್ಲ) | |
| 15 | ಕೋರಲಾದ ಮೀಸಲಾತಿ ವಿವರ<br>(ದೃಢೀಕೃತ ದಾಖಲೆಯನ್ನು ಲಗತ್ತಿಸುವುದು) | |

ಮೇಲ್ಕಂಡ ಎಲ್ಲಾ ಅಂಶಗಳು ಸತ್ಯವಾಗಿರುತ್ತದೆ ಎಂದು ಈ ಮೂಲಕ ಪ್ರಮಾಣಿಕರಿಸುತ್ತೇನೆ.

ಅರ್ಜಿದಾರರ ಸಹಿ

ದಿನಾಂಕ :

ಸ್ಥಳ :

ದೃಢೀಕರಿಸಿದೆ
ನಗರ ಸ್ಥಳೀಯ ಸಂಸ್ಥೆಯ ಪೌರಾಯುಕ್ತರು/ಮುಖ್ಯಾಧಿಕಾರಿಗಳು